

# ಯೇಸು ಕ್ರಿಸ್ತ

ಯೇಸು ಅಥವಾ ಜೀಸಸ್ (ಕ್ರಿ.ಪೂ ೬-೪ ರಿಂದ ಕ್ರಿ.ಶ. ೨೯-೩೩)
ಕ್ರೈಸ್ತ ಧರ್ಮದ ಸ್ಥಾಪನೆಗೆ ಕಾರಣರಾದವರು. ಇವರನ್ನು ಕ್ರೈಸ್ತರು
'ದೇವರಕುಮಾರ'ನೆಂದು ವಿಶ್ವಾಸಿಸುತ್ತಾರೆ. 'ಯೇಸು' ಅಥವಾ 'ಜೀಸಸ್' ಪದವು
ಗ್ರೀಕ್‌ನ I-e-sousವ್ಯುತ್ಪನ್ನವಾದ ಪದವೆಂದು ತಜ್ಞರು ಹೇಳುತ್ತಾರೆ. 'ದೇವರೇ
ಮೋಕ್ಷ' ಎಂಬುದದು ತಜ್ಞರ ಅಭಿಪ್ರಾಯ. 'ಕ್ರಿಸ್ತ'ನ ಅರ್ಥ 'ರಕ್ಷಕ'.
ಈ ಅರ್ಥದಲ್ಲಿ ಯೇಸು ಕ್ರಿಸ್ತ (ಜೀಸಸ್ ಕ್ರೈಸ್ಟ್) ಎಂಬ ಹೆಸರು
ಉಪಯೋಗವಾಗುತ್ತದೆ. ಇಸ್ಲಾಮ್ ಧರ್ಮವು ಯೇಸುವನ್ನು
ದೇವಕುಮಾರನೆಂದು ಹೇಳುವುದಿಲ್ಲ. ಬದಲಾಗಿ ಕ್ರಿಸ್ತನನ್ನು ಒಬ್ಬ ಮುಖ್ಯ
ಪ್ರವಾದಿ ಎಂದು ಹೇಳುತ್ತದೆ.

ಯೇಸು ಹುಟ್ಟಿದ್ದು ಬೆತ್ಲೆಹೆಮ್‌ನಲ್ಲಾದರೂ, ಅವರು ಬೆಳೆದದ್ದು ಮಾತ್ರ ಅವರ
ತಂದೆ ಮತ್ತು ತಾಯಿ ವಾಸವಾಗಿದ್ದ ನಜರೆತ್ ಎಂಬ ಊರಿನಲ್ಲಿ. ಹಾಗಾಗಿ
ಯೇಸುವನ್ನು 'ನಜರೆತ್‌ನ ಯೇಸು'ವೆಂದು ಕರೆಯುವುದೇ ವಾಡಿಕೆ.
ಇಹಲೋಕದಲ್ಲಿ ಯೇಸುವಿನ ತಂದೆ ಸಂತ ಜೋಸೆಫ್ ಒಬ್ಬ ಬಡಗಿ. ತಾಯಿ
ಸಂತ ಮೇರಿ. ವಾಸ್ತವವಾಗಿ ಮೇರಿಯು ಪವಿತ್ರಾತ್ಮ
ವರದಿಂದಕರ್ತನಾದ ಯೇಸುಕ್ರಿಸ್ತನನ್ನು ಗರ್ಭದಲ್ಲಿ ಹೊಂದಿ ಪರಿಶುದ್ಧ ಜೀವನ
ನಡೆಸುತ್ತಾಳೆ. ನವಮಾಸಗಳ ಗರ್ಭಿಣಿಯಾಗಿದ್ದಾಗ, ಕಡ್ಡಾಯವಾಗಿ ಜನಗಣತಿಗೆ
ಹಾಜರಾಗಬೇಕಾಗಿ ಬಂತು. ಆಗ ಜೋಸೆಫ್ ತನ್ನ ಮಡದಿಯನ್ನು ಬೆತ್ಲೆಹೆಮ್‌ಗೆ
ಕರೆದೊಯ್ಯುತ್ತಾನೆ. ಅಲ್ಲಿ ಉಳಿದುಕೊಳ್ಳಲು ಅವರಿಗೆ ಸಿಕ್ಕಿದ್ದು ಒರಿದು ದನಗಳ
ಕೊಟ್ಟಿಗೆ. ಅಲ್ಲೇ ಯೇಸುವಿನ ಜನನವಾಗುತ್ತದೆ.

- ಯೇಸುವಿನ ಜೀವನ ವೃತ್ತಾಂತ ಕಂಡುಬರುವುದು ಕ್ರೈಸ್ತರಿಗೆ ಧರ್ಮಗ್ರಂಥವಾದ ಬೈಬಲ್‌ನ ಹೊಸ ಒಡಂಬಡಿಕೆಯ ನಾಲ್ಕುಪ್ರಮುಖ ಭಾಗಗಳಾದ ಮತ್ತಾಯ, ಮಾರ್ಕ್, ಲೂಕ್,ಮತ್ತು ಜಾನ್ ಬರೆದ ಸುವಾರ್ತೆಗಳಲ್ಲಿ. ಹಳೇ ಒಡಂಬಡಿಕೆಯಲ್ಲಿ ಯೇಸುಕ್ರಿಸ್ತನ ಬರುವಿಕೆಯ ಕುರಿತು ಅನೇಕ ಉಲ್ಲೇಖಗಳಿವೆ. ಇಸ್ರೇಲ್‌ನ ಬೆತ್ಲೆಹೆಮ್‌ನಲ್ಲಿ ಹುಟ್ಟಿ ಯೇಸು ಅನೇಕ ಸೂಚಕ ಕಾರ್ಯಗಳನ್ನು ಮಾಡಿ, ದೇವರ ಸಂದೇಶವನ್ನು ಜನರಿಗೆ ಬೋಧಿಸಿ, ಮೊದಲೇ ಮೋಶೆಯ ಧರ್ಮಗ್ರಂಥದಲ್ಲಿ ಲಿಖಿಸಲ್ಪಂತೆ ಲೋಕಪಾಪಗಳನ್ನು ಹೊತ್ತುಕೊಂಡು ಹೋಗುವ ದೇವರ ಕುರಿಮರಿ ಎಂಬ ವಾಕ್ಯದ ನೆರವೇರಿಕೆಗಾಗಿ ರೋಮನ್ ಅಧಿಕಾರಿಯ ಅಪ್ಪಣೆಯ ಮೇರೆಗೆ ಶಿಲುಬೆಗೆ ಏರಿಸಲ್ಪಡುತ್ತಾರೆ. ಮೂರು ದಿನಗಳ ನಂತರ ತನ್ನ ಸಮಾಧಿಯಿಂದ ಅವರು ಮೇಲೆದ್ದರು (ಪುನರುತ್ಥಾನ ಹೊಂದಿದರು) ಎಂಬುದನ್ನು ಬೈಬಲ್ ಹೇಳುತ್ತದೆ.
ಯೇಸು ಕ್ರಿಸ್ತನಉಪದೇಶಗಳು ಮತ್ತು ಜೀವನ ಬೈಬಲ್‌ನ ಹೊಸ ಒಡಂಬಡಿಕೆಯ ( ನ್ಯೂ ಟೆಸ್ಟಮೆಂಟ್) ಮುಖ್ಯ ವಿಷಯವಾಗಿದ್ದು ಕ್ರೈಸ್ತ ಧರ್ಮದ ಮೂಲಭೂತ ಉಪದೇಶಗಳಾಗಿವೆ.





- **ಹಳೆ ಒಡಂಬಡಿಕೆ**ಯು (Old Testament) ಬೈಬಲ್ ನ ಪ್ರಥಮ ಭಾಗವಾಗಿದೆ. ಸುಮಾರು ೨೦೦೦ ವರ್ಷಗಳ ಐತಿಹ್ಯವಿರುವ ಬೈಬಲ್‌ನ ಮೂಲ ರೂಪ ಹೀಬ್ರುಗಳ ಪವಿತ್ರ ಗ್ರಂಥವಾದ ತನಕ್. ೫೦೦೦ ವರ್ಷಗಳ ಇತಿಹಾಸವನ್ನು ಹೊಂದಿರುವ ಇದು ಬೈಬಲ್‌ನ ಒಂದು ಭಾಗವಾಗಿ ಉಳಿದುಕೊಂಡಿದೆ. ಯೇಸು ಕ್ರಿಸ್ತನು ಮತ್ತು ಆತನ ಶಿಷ್ಯರು ತಮ್ಮ ಭೋದನೆಗಳಲ್ಲಿ ಹಳೆ ಒಡಂಬಡಿಕೆಯ ಅನೇಕ ಭಾಗಗಳನ್ನು ಆಧಾರ ಮಾಡಿಕೊಂಡು ಭೋದಿಸುತ್ತಿದ್ದರು.**ಹಳೆ ಒಡಂಬಡಿಕೆ**ಯ ಈ ಭಾಗಗಳನ್ನು ಮೋಸೆಸ್‌ನ ಧರ್ಮಶಾಸ್ತ್ರ, ಪ್ರವಾದನ ಗ್ರಂಥ, ಕೀರ್ತನೆಗಳು ಎಂದು ವಿಂಗಡಿಸಲಾಗಿದೆ.

- **ಹೊಸ ಒಡಂಬಡಿಕೆ**ಯು (New Testament) ಬೈಬಲ್ ನ ದ್ವಿತೀಯ ಭಾಗವಾಗಿದೆ. ಇದು ಕ್ರಿಸ್ತನ ಜನನ, ಬೋಧನೆ, ಶ್ರಮ, ಮರಣ, ದಿವ್ಯಾರ್ರೋಹಣ ಮತ್ತು ನಂತರದವಿಷಯಗಳ ಬಗ್ಗೆ ಬೆಳಕು ಚೆಲ್ಲುತ್ತದೆ. ಹೊಸ ಒಡಂಬಡಿಕೆಯ ಮೊದಲಿನ ೪ ಪುಸ್ತಕಗಳನ್ನು 'ಸುವಾರ್ತೆಗಳು' ಅಥವಾ 'ಸುಸಂದೇಶಗಳು' ಎಂದು ಕರೆಯಲಾಗುತ್ತವೆ. ಇದಲ್ಲದೆ ಹೊಸ ಒಡಂಬಡಿಕೆಯು ಪ್ರೇಷಿತರ ಕಾರ್ಯಕಲಾಪಗಳು, ಪೌಲನ ೧೩ ಪತ್ರಿಕೆಗಳು ಮತ್ತು ಇತರ ೮ ಪತ್ರಿಕೆಗಳೂ ಹಾಗು ದಿವ್ಯದರ್ಶನಗಳ ಪ್ರಕಟಣೆಯೂ ಒಳಗೊಂಡಂತೆ ಒಟ್ಟು ೨೭ ಪುಸ್ತಕಗಳಿರುತ್ತವೆ.

- ಬೈಬಲ್ ಅಥವ ಸತ್ಯವೇದ ಕ್ರೈಸ್ತರ ಪವಿತ್ರ ಗ್ರಂಥವಾಗಿದೆ. ಬೈಬಲ್ ಎಂಬ ಪದವು ಗ್ರೀಕ್ ಮತ್ತು ಲ್ಯಾಟಿನ್ ಭಾಷೆಯಿಂದ ಉದ್ಭವಿಸಿದೆ. ಇದರ ಅರ್ಥ, 'ಪುಸ್ತಕಗಳು'ಅಥವಾ 'ಪುಸ್ತಕಗಳ ಸಂಗ್ರಹ. ಬೈಬಲ್‌ನ ಪ್ರಮುಖ ಭಾಗಗಳದ " ಹಳೆ ಒಡಂಬಡಿಕೆ"ಯಲ್ಲಿ ಒಟ್ಟು ೩೯(ಪ್ರೊಟೆಸ್ಟಂಟ್)ಅಥವಾ ೫೨(ರೋಮನ್ ಕಥೋಲಿಕ)ಪುಸ್ತಕಗಳೂ " ಹೊಸ ಒಡಂಬಡಿಕೆ"ಯಲ್ಲಿ ಒಟ್ಟು ೨೭ ಪುಸ್ತಕಗಳೂ ಇವೆ.ಇವು ದೈವ ಪ್ರೇರಣೆಯಿಂದ ಬೇರೆ ಬೇರೆ ಕಾಲಘಟ್ಟಗಳಲ್ಲಿ, ಬೇರೆ ಬೇರೆ ಸ್ಥಳಗಳಲ್ಲಿ, ಬೇರೆ ಬೇರೆ ವ್ಯಕ್ತಿಗಳಿಂದ ರಚಿಸಲ್ಪಟ್ಟ ಪುಸ್ತಕಗಳ ಸಂಗ್ರಹವೆಂಬುದು ಕ್ರೈಸ್ತರ ನಂಬಿಕೆ. ಇಂದು ಪುಸ್ತಕದ ರೂಪದಲ್ಲಿ ನೋಡುತ್ತಿರುವ ಬೈಬಲ್ ಮೂಲರೂಪವಾದ ಹಳೇ ಒಡಂಬಡಿಕೆಯು ಆರಂಭದಲ್ಲಿ 'ದೈವ ವಾಕ್ಯ'ವೆಂಬ ಭಯ, ಭಕ್ತಿಯಿಂದ ಒಂದಕ್ಷರವೂ ಬದಲಾಗದಂತೆ ಜನರ ಬಾಯಿಂದ ಬಾಯಿಗೆ ಪ್ರಸಾರವಾಗುತಿತ್ತು. ಲಿಪಿಗಳು ಬಳಕೆಗೆ ಬರುತಿದ್ದಂತೆ ಅತ್ಯಂತ ಶ್ರದ್ಧೆಯಿಂದ ಈ ವಾಕ್ಯಗಳನ್ನು ಕ್ರಮವಾಗಿ ಕಲ್ಲು, ಮೇಣ, ಜೇಡಿ ಮಣ್ಣಿನ ಫಲಕಗಳ ಮೇಲೆ ಬರೆದಿರಿಸತೊಡಗಿದರು. ಆನಂತರ ಪಾಪಿರಸ್ ಎಂಬ ವಸ್ತುವಿನ ಮೇಲೆ ಹಾಗೂ ಕುರಿ, ಮೇಕೆ, ಹಸುವಿನ ಚರ್ಮದ ತೆಳು ಹಾಳೆಗಳ ಮೇಲೆ ಬರೆಯಲು ಉಪಕ್ರಮಿಸಿದರು
- ಸುಮಾರು ೧೫೦೦-೨೦೦೦ ವರ್ಷಗಳ ಐತಿಹ್ಯವಿರುವ ಬೈಬಲ್‌ನ ಮೂಲ ರೂಪ ಹೀಬ್ರುಗಳ ಪವಿತ್ರ ಗ್ರಂಥವಾದ ತನಕ್. ೫೦೦೦ ವರ್ಷಗಳ ಇತಿಹಾಸವನ್ನು ಹೊಂದಿರುವ ಇದು ಹಳೆ ಒಡಂಬಡಿಕೆ ಎಂಬ ಹೆಸರಿನಲ್ಲಿ ಬೈಬಲ್‌ನ ಒಂದು ಭಾಗವಾಗಿ ಉಳಿದುಕೊಂಡಿದೆ. ಲಿಪಿಗಳು ಆರಂಭವಾಗುವ ಮೊದಲು 'ದೈವ ವಾಕ್ಯ'ಗಳನ್ನು ಕಲ್ಲು, ಮೇಣ ಮತ್ತು ಜೇಡಿ ಮಣ್ಣಿನ ಫಲಕಗಳ ಮೇಲೆ ಸರಳ ರೂಪದ ಚಿತ್ರಗಳಾಗಿ ಕೆತ್ತುತ್ತಿದ್ದರು. ಇದನ್ನು 'ಕ್ಯುನಿಫಾರ್ಮ್ ಬರವಣಿಗೆ' ಎನ್ನುತ್ತಾರೆ. ಕ್ರಿ.ಪೂ.೧ರ ವೇಳೆಗೆ ಹೀಬ್ರೂ ಭಾಷೆ ಬಳಕೆಗೆ ಬಂದು ಅದು ಈ ಗ್ರಂಥದ ಮೊದಲ ಲಿಪಿಯಾಯಿತು. ಬೈಬಲ್‌ನ ಕೆಲವು ಪ್ರತಿಗಳು ಅರಾಮ್ಯಿಕ್ ಭಾಷೆಯಲ್ಲೂ ಬರೆದಿರುವುದು ದೊರಕಿದೆ. ಮುಂದೆ ಇವುಗಳನ್ನು ಗ್ರೀಕ್‌ಗೆ ಭಾಷಾಂತರಿಸಲಾಯಿತು. ಈಗ ಜಗತ್ತಿನ ಅನೇಕ ಭಾಷೆಗಳಲ್ಲಿ 'ಬೈಬಲ್' ಲಭ್ಯವಿವೆಯಲ್ಲದೇ, ಅನೇಕ ಭಾಷೆಗಳಲ್ಲಿ ತರ್ಜುಮೆಗೊಂಡ ಏಕೈಕ ಗ್ರಂಥವೆಂಬ ಹೆಗ್ಗಳಿಕೆಗೂ ಪಾತ್ರವಾಗಿದೆ ಜಾನ್ ಹ್ಯಾಂಡ್ಸ್ ಅವರು ಕನ್ನಡ ಭಾಷೆಗೆಬೈಬಲ್ ಅನುವಾದ.



ಏಸು ಕ್ರಿಸ್ತನು ಒಂದು ಸಾರಿ ತನ್ನ ಅನುಯಾಯಿಗಳಿಗೆ ಹೇಳುತ್ತಾನೆ. ದೇವರಾದ ಪರಮಪಿತನು ಮನುಷ್ಯನು ಕೈಗಳಿಂದ ಕಟ್ಟಿದ್ದ ದೇವಾಲಯ ಚರ್ಚುಗಳಲ್ಲಿ ವಾಸಿಸುವುದಿಲ್ಲ. ಅವನು ನಿಮ್ಮ ಹೃದಯ ಮಂದಿರಗಳಲ್ಲಿ ಮಾತ್ರ ವಾಸ ಮಾಡುತ್ತಾನೆ. ಆ ಹೃದಯ ಮಂದಿರದಲ್ಲಿರುವ ನಾನು ಎಂಬ ಆತನಿಗೂ , ನಿಮಗೂ ಅಂತರ ಬಹಳ ದೂರವಿರುತ್ತದೆ. ಆ ದೂರದಿಂದ ನೀವು ಹತ್ತಿರವಾಗಿಸ ಬೇಕಾದರೆ ಮೊದಲು ಕಾಮ, ಕ್ರೋಧ, ಮದ, ಮತ್ಸರ್ಯ ಕಳ್ಳತನ, ಕೊಲೆ, ಮೋಸ, ಮೇಲು ಕೀಳು, ಜಾತಿ ಭೇಧ, ಅಸೂಯೇ, ದ್ವೇಷ, ದೌರ್ಜನ್ಯ, ಹಿಂಸೆ, ಅತಿಯಾಸೆ, ಅನ್ಯಾಯಯನ್ನು ಬಿಟ್ಟು ಸ್ನೇಹ ಪ್ರೀತಿಯಲಿ ಎಲ್ಲರಲಿ ಸುಖ ಕಾಣುವಂತಾಗಬೇಕು. ಆಗ ನಾನು ಎಂಬ ಆತನೂ ನಿಮ್ಮ ಹೃದಯ ಮಂದಿರದಲ್ಲಿ ನೆಲೆಸುತ್ತಾನೆ. ಇಂದು ಹೀಗೆ ಈ ಎಲ್ಲವನೂ ಬಿಟ್ಟವರು ಯಾರಿದ್ದಾರೆ ನೀವೇ ಹೇಳಿ ? ಇದನ್ನು ಒಂದೊಂದಾಗಿ ಬಿಡುತ್ತಾಬಂದಲ್ಲಿ ದೇವರಿಗೂ ನಮಗೂ ಹತ್ತಿರ ಹತ್ತಿರವಾಗಿ ಒಂದು ದಿನ ದೇವರು ನಮ್ಮ ಹೃದಯದಲ್ಲಿ ಐಕ್ಯವಾಗಬಹುದು ಎನ್ನುತ್ತಾನೆ.